NOVEMBER 06, 2026
AKASHAVANI - DHARWAD
PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೆಳಕಿನ ಹಬ್ಬ ದೀಪಾವಳಿಯ ಹೊಸ್ತಿಲಲ್ಲಿ, ಪ್ರಥಮ ಆಚರಣೆ, ಧನ ತ್ರಯೋದಶಿ – ಧನ್‌ತೇರಸ್. ನಾಡಿನಾದ್ಯಂತ ಭಗವಾನ್ ಕುಬೇರ ಹಾಗೂ ಧನ್ವಂತರಿ ದೇವಿಯನ್ನು, ನಾಳೆ ಶ್ರದ್ಧಾಭಕ್ತಿಯಿಂದ ಪೂಜಿಸಲಾಗುತ್ತದೆ. ಬಂಗಾರ ಹಾಗೂ ಬೆಳ್ಳಿಯ ಖರೀದಿ ಜೊತೆಗೆ, ಒಳ್ಳೆಯ ಅದೃಷ್ಟವನ್ನು ಮನೆಗೆ ಆಹ್ವಾನಿಸುವ ನಂಬಿಕೆಯೊಂದಿಗೆ, ವಿಶಿಷ್ಟ ಆಚರಣೆ ಧನ್‌ತೇರಸ್, ಶ್ರದ್ಧಾ–ಭಕ್ತಿ ಹಾಗೂ ಸಂಭ್ರಮದಿಂದ ಜರುಗಲಿದೆ.

<><><>

ಧಾರವಾಡ–ಹುಬ್ಬಳ್ಳಿ ಸೇರಿದಂತೆ, ನಾಡಿನ ವಿವಿಧೆಡೆ, ಹಬ್ಬಕ್ಕಾಗಿ ಹಣ್ಣು, ಹೂವು, ಅಲಂಕಾರಿಕ ವಸ್ತುಗಳು, ಮಣ್ಣಿನ ದೀಪಗಳು, ಆಕಾಶಬುಟ್ಟಿ ಖರೀದಿಯ ಭರಾಟೆ, ಮಾರುಕಟ್ಟೆಗಳಲ್ಲಿ ಜೋರಾಗಿದೆ.

<><><>

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ನಾಡಿನ ಜನತೆಗೆ, ಧನ ತ್ರಯೋದಶಿ ಹಾಗೂ ದೀಪಾವಳಿ ಹಬ್ಬದ, ಹಾರ್ದಿಕ ಶುಭಾಶಯ ಕೋರಿದ್ದು, ಬೆಳಕಿನ ಹಬ್ಬ ದೀಪಾವಳಿ, ಅಂಧಕಾರ ಕಳೆದು, ನಾಡಿನ ಜನತೆಗೆ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿ ಕರುಣಿಸಲಿ, ಎಂದಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿ, ಕೇಂದ್ರ ಕಚೇರಿ ಹೊಂದಿರುವ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ, ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ಸಂಸ್ಥೆ – ಕೆ.ಆರ್.ಸಿ. ಆರ್.ಟಿ.ಸಿ. ಎಂದು, ಮರುನಾಮಾಂಕಿತ ಗೊಳಿಸಿ, ಸಾರಿಗೆ ಇಲಾಖೆ ಆದೇಶಿಸಿದೆ.

<><><>

5ನೇ ಆವೃತ್ತಿಯ, ರಾಷ್ಟ್ರವ್ಯಾಪಿ ಡಿಜಿಟಲ್ ಜೀವಿತ ಪ್ರಮಾಣಪತ್ರ ನೀಡಿಕೆ ಅಭಿಯಾನದಡಿ, ರೇಲ್ವೆ ಇಲಾಖೆ ಸೇರಿದಂತೆ, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ, ಪಿಂಚಣಿದಾರರ ಅನುಕೂಲಕ್ಕಾಗಿ, 'ಡಿಜಿಟಲ್ ಜೀವಿತ ಪ್ರಮಾಣ ಪತ್ರ' ಶಿಬಿರಗಳನ್ನು ಆಯೋಜಿಸಿದೆ. ಪಿಂಚಿಣಿದಾರರು ಮತ್ತು ಕುಟುಂಬ ಪಿಂಚಣಿದಾರರು, 'ಜೀವನ್ ಪ್ರಮಾಣ್' ಆಪ್ ಮೂಲಕ, ಈ ತಿಂಗಳ 30ನೇ ತಾರೀಖಿನ ವರೆಗೆ, ಜೀವಿತ ಪ್ರಮಾಣ ಪತ್ರಗಳನ್ನು, ಅಂಚೆ ಕಚೇರಿ ಅಥವಾ ಬ್ಯಾಂಕ್ ಮೂಲಕ, ಸಲ್ಲಿಸಬಹುದು. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್, ಧಾರವಾಡ ಶಾಖೆಯ ಪ್ರಬಂಧಕ, ದರ್ಶನ ಎನ್.ಎಚ್.

<><><>

ಪ್ರಬಂಧಕ ದರ್ಶನ ಎನ್.ಎಚ್. ಧ್ವನಿ 45 ಸೆಕೆಂದುಗಳು

<><><>

ಪುನರ್ವಸಿತ, ವಿಮುಕ್ತ ದೇವದಾಸಿಯರಿಗೆ ಮತ್ತು ಅವರ ಮಕ್ಕಳ ಸಮಸ್ಯೆಗಳಿಗೆ, ಮಾನವೀಯತೆಯಿಂದ ಸ್ಪಂದಿಸಿ, ಪರಿಹರಿಸಬೇಕು ಎಂದು, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ಡಾಕ್ಟರ್ ನಾಗಲಕ್ಷ್ಮೀ ಚೌಧರಿ, ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ದೇವದಾಸಿ ಪದ್ಧತಿ ಕೊನೆಗಾಣಬೇಕು. ಆ ಕುಟುಂಬಗಳಿಗೆ ಅಗತ್ಯ ನೆರವು ಒದಗಿಸಿ, ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ, ಮರು ಸಮೀಕ್ಷೆ ನಡೆಸಲಾಗಿದ್ದು, ಒಟ್ಟು 5 ಸಾವಿರದ ಇನ್ನೂರಾ 46 ವಿಮುಕ್ತ ದೇವದಾಸಿಯರನ್ನು, ಗುರುತಿಸಲಾಗಿದೆ. ಆ ಪೈಕಿ, 2 ಸಾವಿರದ 2 ನೂರಾ 33 ವಿಮುಕ್ತ ದೇವದಾಸಿಯರು ಈಗಾಗಲೇ ಮೃತಪಟ್ಟಿದ್ದಾರೆ.

<><><>

ಆಡಳಿತ ಕೇಂದ್ರವಾದ, ಬೆಂಗಳೂರಿನ ವಿಧಾನಸೌಧದಲ್ಲಿ, ಕನ್ನಡ ಭಾಷೆಯ ಘನತೆ, ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆ ಹಾಗೂ ಕನ್ನಡದ ಚಿಂತನಾ ಪರಂಪರೆಯನ್ನು ಸಾರುವ, 110 ಕನ್ನಡ ನುಡಿ

ಫಲಕಗಳನ್ನು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಅನಾವರಣಗೊಳಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಪ್ರೊಫೆಸರ್ ಪುರುಷೋತ್ತಮ ಬಿಳಿಮಲೆ ಮಾತನಾಡಿ, 55 ಸಾಹಿತಿಗಳು, ಚಿಂತಕರು ಮತ್ತು ಮಹನೀಯರ ಬರೆಹಗಳಿಂದ, ಘೋಷವಾಕ್ಯಗಳನ್ನು ಆಯ್ದುಕೊಳ್ಳಲಾಗಿದೆ ಎಂದರು.

<><><>

ನಿಧನ ವಾರ್ತೆ

<><><>

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ, ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ, ಖ್ಯಾತ ಸಾಹಿತಿ, ವಿಮರ್ಶಕ ಹಾಗೂ ಭಾಷಾತಜ್ಞ, ಪ್ರೊಫೆಸರ್ ಕೆ.ವಿ. ನಾರಾಯಣ, ಬೆಂಗಳೂರಿನಲ್ಲಿ ಇಂದು ಬೆಳಗ್ಗೆ ನಿಧನರಾಗಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೇಜಿಸ್ ಫೆಲೋ ಆಗಿದ್ದ, ವಿದ್ವಾಂಸ ಕೆ.ವಿ.ಎನ್., ಹಂಪಿ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟಿ ಬೆಳೆಸುವಲ್ಲಿ, ಮಹತ್ವದ ಕೊಡುಗೆ ನೀಡಿದವರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಧಾರವಾಡದ, ಕರ್ನಾಟಕ ವಿಶ್ವವಿದ್ಯಾಲಯದ, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಕಟ್ಟಿ ಬೆಳೆಸಿದ, ಪ್ರೊಫೆಸರ್ ಬಿ.ವೈ.ಎಂ. ಗೌಡರ, ಇಂದು ಬೆಳಗ್ಗೆ ಧಾರವಾಡದಲ್ಲಿ ನಿಧನರಾಗಿದ್ದಾರೆ. ಅವರಿಗೆ 99 ವರ್ಷ ವಯಸ್ಸಾಗಿತ್ತು. ಇಂದು ಮಧ್ಯಾಹ್ನ 1 ಗಂಟೆಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಧಾರವಾಡದಲ್ಲಿ ನಡೆಯಲಿದೆ ಎಂದು, ಕುಟುಂಬ ವರ್ಗ ತಿಳಿಸಿದೆ.

<><><>

ಕ್ಯಾನ್ಸರ್ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ – ಕೆ.ಎಂ.ಸಿ. ಆರ್.ಐ. ಮತ್ತು ಬೆಂಗಳೂರಿನ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ, 40 ಕೋಟಿ ರೂಪಾಯಿ ವೆಚ್ಚದಲ್ಲಿ, ತಲಾ ಒಂದೊಂದು ರೊಬೊಟಿಕ್ ಸರ್ಜರಿ ಉಪಕರಣ ಖರೀದಿಸಲು, ರಾಜ್ಯ ಸಚಿವ ಸಂಪುಟ, ಅನುಮೋದಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.